## 2018 ಕ.ತೀ.ವ 1579

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಾನ್ ಮೈಕೆಲ್ ಕುನ್ಹಾ

### ಬಿ.ಎಲ್. ಉದಯ್‌ಕುಮಾರ್ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ (ಕುಶಾಲನಗರ ಪೊಲೀಸ್ ಠಾಣೆ)*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅರ್ಜಿ

ಇದರಲ್ಲಿನ ಅರ್ಜಿದಾರರು, ಭಾರತ ದಂಡ ಸಂಹಿತೆಯ 408ನೇ ಮತ್ತು 201ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಗಳನ್ನು ಎಸಗಿದ್ದಾರೆಂದು ಆರೋಪಿಸಿ, ಅವರ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂಬ ಸಂಗತಿಗಳ ಆಧಾರದ ಮೇಲೆ ಪ್ರಶ್ನೆಯನ್ನು ಎತ್ತಿದ್ದಾರೆ. ವಿಚಾರಣೆ ಅವಧಿಯಲ್ಲಿ, ಪಟ್ಟಿಯಲ್ಲಿ ನಮೂದಿಸಿದ 17 ದಸ್ತಾವೇಜುಗಳನ್ನು ಹಾಜರುಪಡಿಸಲು ಕೋರಿ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 242(2)ನೇ ಪ್ರಕರಣದ ಅಡಿಯಲ್ಲಿ ಪ್ರಾಸಿಕ್ಯೂಷನ್ ಅರ್ಜಿ ಸಲ್ಲಿಸಿದ್ದಾರೆ. ಆರೋಪ ಪಟ್ಟಿಯನ್ನು ಸಲ್ಲಿಸುವ ಸಮಯದಲ್ಲಿ, ಅರ್ಜಿಯಲ್ಲಿ ಪಟ್ಟಿ ಮಾಡಿರುವ ಮೂಲ ದಸ್ತಾವೇಜುಗಳನ್ನು, ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ಹಾಗೂ ಹಿರಿಯ ನ್ಯಾಯಾಧೀಶರು ಮತ್ತು ಸಿಜೆಎಮ್, ಕೊಡಗು ಇವರ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿದೆ; ಆದುದರಿಂದ, ಅವುಗಳ ಜೆರಾಕ್ಸ್ ಪ್ರತಿಗಳನ್ನು ಆರೋಪ ಪಟ್ಟಿಯೊಂದಿಗೆ ಸಲ್ಲಿಸಲಾಗಿತ್ತು. ಜೆರಾಕ್ಸ್ ಪ್ರತಿಗಳು ಸಾಕ್ಷ್ಯದಲ್ಲಿ ಅಂಗೀಕಾರಾರ್ಹವಲ್ಲದೆ ಇರುವುದರಿಂದ, ಫಿರ್ಯಾದುದಾರನು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಿಂದ ಹಾಗೂ ಹಿರಿಯ ನ್ಯಾಯಾಧೀಶರು ಮತ್ತು ಸಿಜೆಎಮ್, ಕೊಡಗು ಇವರ ನ್ಯಾಯಾಲಯದಿಂದ ಮೇಲಿನ ದಸ್ತಾವೇಜುಗಳನ್ನು ಪಡೆದುಕೊಂಡಿದ್ದು, ಅವುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಕೋರಿದ್ದರು ಎಂದು ಸದರಿ ಅರ್ಜಿಯಲ್ಲಿ ಹೇಳಲಾಗಿದೆ.

*ಕ್ರಿಮಿನಲ್ ಅರ್ಜಿ ಸಂಖ್ಯೆ: 4398/2018, ದಿನಾಂಕ 23ನೇ ಜುಲೈ, 2018.

ಆರೋಪ ಪಟ್ಟಿಯ ಭಾಗವಾಗಿರದ ದಸ್ತಾವೇಜುಗಳನ್ನು, ವಿಚಾರಣೆಯನ್ನು ಪ್ರಾರಂಭಿಸಿದ ನಂತರ, ಪ್ರಾಸಿಕ್ಯೂಷನ್‌ಗಾಗಿ ಸಾಕ್ಷ್ಯದಲ್ಲಿ ಸ್ವೀಕರಿಸಬಹುದೇ? ಎಂಬುದು, ಈ ಮೊಕದ್ದಮೆಯಲ್ಲಿ ನಿರ್ಧರಿಸುವುದಕ್ಕಾಗಿ ಮುಂದಿಟ್ಟ ಪ್ರಶ್ನೆಯಾಗಿದೆ.

ತನಿಖಾ ಏಜನ್ಸಿಯು, ಮೂಲ ದಸ್ತಾವೇಜುಗಳನ್ನು ಸೂಕ್ತ ಮಹಜರ್ ಮೂಲಕ ಜಫ್ತಿ ಮಾಡಿ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(8)ನೇ ಪ್ರಕರಣದ ಪರಿಭಾಷೆಯಲ್ಲಿ, ಅದರ ಪ್ರಾಥಮಿಕ ವರದಿಗೆ, ಪೂರಕ ವರದಿಯನ್ನು ಸಲ್ಲಿಸಬೇಕಿತ್ತು ಎಂದು ವಾದಿಸಿ, ದಾಖಲೆಯಲ್ಲಿರುವ ಮೇಲಿನ ದಸ್ತಾವೇಜುಗಳನ್ನು ಸ್ವೀಕರಿಸಲು ಇದರಲ್ಲಿನ ಅರ್ಜಿದಾರರು ತೀವ್ರ ಆಕ್ಷೇಪಣೆಯನ್ನು ಎತ್ತಿದ್ದಾರೆ. ಜೆರಾಕ್ಸ್ ದಸ್ತಾವೇಜುಗಳ ಜಫ್ತಿಯ ವಾಸ್ತವ ಸಂಗತಿಯನ್ನು, ಆರೋಪ ಪಟ್ಟಿಯೊಂದಿಗೆ ಹಾರುಪಡಿಸಲಾಗಿರುವ ದಿನಾಂಕ: 24.06.2010ರ ಮಹಜರ್ ಬಹಿರಂಗಪಡಿಸುವುದಿಲ್ಲ; ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 242(2)ನೇ ಪ್ರಕರಣವು, ಆರೋಪ ಪಟ್ಟಿಯನ್ನು ಸಲ್ಲಿಸಿದ ನಂತರ, ತಡವಾದ ಹಂತದಲ್ಲಿ ದಸ್ತಾವೇಜುಗಳನ್ನು ಸಲ್ಲಿಸಲು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ಅವಕಾಶ ನೀಡುವುದಿಲ್ಲ; ಎಲ್ಲಾ ಸುಸಂಗತ ದಸ್ತಾವೇಜುಗಳನ್ನು ಆರೋಪ ಪಟ್ಟಿಯೊಂದಿಗೆ ಹಾಜರುಪಡಿಸಬೇಕೆಂದು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(8)ನೇ ಪ್ರಕರಣವು ನಿಯಮಿಸುತ್ತದೆ; ಆದುದರಿಂದ, ವಿಚಾರಣೆ ಅವಧಿಯಲ್ಲಿ ಪ್ರಸ್ತಾವಿಸಿದ ದಸ್ತಾವೇಜುಗಳನ್ನು ಹಾಜರುಪಡಿಸಲು ಪ್ರಾಸಿಕ್ಯೂಷನ್‌ಗೆ ಅವಕಾಶವಿರುವುದಿಲ್ಲ ಎಂದು ವಾದಿಸಲಾಗಿದೆ.

242ನೇ ಪ್ರಕರಣದ (3)ನೇ ಉಪ-ಪ್ರಕರಣವು, ಪ್ರಾಸಿಕ್ಯೂಷನ್ ಸಮರ್ಥನೆಗಾಗಿ ಹಾಜರುಪಡಿಸಬಹುದಾದಂಥ ಎಲ್ಲಾ ಸಾಕ್ಷ್ಯಗಳನ್ನು ತೆಗೆದುಕೊಳ್ಳಲು ಮ್ಯಾಜಿಸ್ಟ್ರೇಟರ ಮೇಲೆ ಕಡ್ಡಾಯ ಕರ್ತವ್ಯವನ್ನು ಗೊತ್ತುಪಡಿಸುತ್ತದೆ. (3)ನೇ ಉಪ-ಪ್ರಕರಣದಲ್ಲಿರುವ "ಹಾಜರುಪಡಿಸಿದ" ಎಂಬ ಪದವು, ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ವಿಷಯಗಳನ್ನು ಮಾತ್ರ ಸಾಕ್ಷ್ಯವಾಗಿ ಹಾಜರುಪಡಿಸಬೇಕೆಂಬ ತೀರ್ಮಾನಕ್ಕೆ ಬರುವ ನಿರ್ಬಂಧಕ ಅರ್ಥವನ್ನು ನೀಡುವುದಿಲ್ಲ. ಇಂಥ ವ್ಯಾಖ್ಯಾನವು ವಿಚಾರಣೆಯ ಮೂಲ ಉದ್ದೇಶವನ್ನೇ ವಿಫಲಗೊಳಿಸುತ್ತದೆ. ಕ್ರಿಮಿನಲ್ ವಿಚಾರಣೆಯ ಮುಖ್ಯ ಉದ್ದೇಶ ಸತ್ಯವನ್ನು ಕಂಡುಕೊಳ್ಳುವುದಾದರೆ, ನ್ಯಾಯಾಲಯವು ಒಂದು ನ್ಯಾಯಯುತ ತೀರ್ಮಾನಕ್ಕೆ ಬರಲು ಸಹಾಯಕವಾಗುವಂಥ ಎಲ್ಲಾ ಮತ್ತು ಸಾಕ್ಷ್ಯದ ಪ್ರತಿಯೊಂದು ಭಾಗವನ್ನು

ಅವಶ್ಯವಾಗಿ ದಾಖಲೆಗೆ ತೆಗೆದುಕೊಳ್ಳಲು ಅನುಮತಿ ನೀಡಬೇಕಾಗುತ್ತದೆ. ಆದುದರಿಂದ, ವಿಚಾರಣಾ ಅವಧಿಯಲ್ಲಿ ಹಾಜರುಪಡಿಸಬೇಕೆಂದು ಕೋರಿದ ಸಾಕ್ಷ್ಯವನ್ನು, ತನಿಖಾ ಅವಧಿಯಲ್ಲಿ ಸಂಗ್ರಹಿಸಿರಲಿ ಅಥವಾ ಅದರ ನಂತರದಲ್ಲಿ ಸಂಗ್ರಹಿಸಿರಲಿ, ಅದು ಮುಖ್ಯವಾಗುವುದಿಲ್ಲ.

ಈ ತೀರ್ಮಾನವು, ಈ ಪ್ರಕರಣದಲ್ಲಿ ಇರುವ ಪ್ರಶ್ನೆಯ ರುಜುವಾತಲ್ಲ. ನನ್ನ ಪರಿಗಣಿತ ಅಭಿಪ್ರಾಯದಲ್ಲಿ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 242ನೇ ಪ್ರಕರಣದ (3)ನೇ ಉಪ–ಪ್ರಕರಣದ ಅಭಿಪ್ರಾಯದಲ್ಲಿ, ಪ್ರಾಸಿಕ್ಯೂಷನ್‌ನ ಸಮರ್ಥನೆಯಲ್ಲಿ ಹಾಜರುಪಡಿಸಬಹುದಾಂಥ ಎಲ್ಲಾ ಸಾಕ್ಷ್ಯವನ್ನು ತೆಗೆದುಕೊಳ್ಳಲು ಮ್ಯಾಜಿಸ್ಟ್ರೇಟರಿಗೆ ಸಂದೇಹಕ್ಕೆ ಆಸ್ಪದವಿಲ್ಲದ ಪದಗಳಲ್ಲಿ ಅಧಿಕಾರವನ್ನು ಪ್ರದತ್ತಗೊಳಿಸಿದೆ. ಇದು, ಅಸದೃಶವಾದ ಉಪಬಂಧವಾಗಿದೆ. ಇದು, ಸಂಹಿತೆಯ 173ನೇ ಪ್ರಕರಣದಿಂದ, ನಿಯಂತ್ರಿತವಾಗಿರುವುದಿಲ್ಲ ಅದರ (8)ನೇ ಉಪ–ಪ್ರಕರಣದಿಂದ ಇನ್ನೂ ಕಡಿಮೆ ನಿಯಂತ್ರಿತವಾಗುತ್ತದೆ. ಒಟ್ಟಾರೆಯಾಗಿ ಅದು ಬೇರೆಯದೇ ವಿಷಯವನ್ನು ನಿರ್ವಹಿಸುತ್ತದೆ. ಸಂಹಿತೆಯ 173(8)ನೇ ಪ್ರಕರಣವು, ಹೆಚ್ಚಿನ ತನಿಖೆಯನ್ನು ನಡೆಸಲು, ಆರೋಪಿಯ ಅಪರಾಧದ ಆಧಾರದ ಮೇಲೆ ಲಭ್ಯವಿರುವ ಸಾಕ್ಷ್ಯವನ್ನು ಒದಗಿಸುವ ಸಂದರ್ಭದಲ್ಲಿ, ಪೊಲೀಸ್ ಅಧಿಕಾರಿಗೆ ಶಾಸನಾತ್ಮಕ ಹಕ್ಕನ್ನು ಪ್ರದಾನ ಮಾಡುತ್ತದೆ. ಮೇಲಿನ ತೀರ್ಪಿನಲ್ಲಿ ನಿರ್ಣಯಿಸಿರುವಂತೆ, ಅದು "ಇನ್ನು ಮುಂದೆ ಪೂರ್ವನಿದರ್ಶನರಹಿತ ವಿಷಯವಲ್ಲ", ಎಂದರೆ, ಮ್ಯಾಜಿಸ್ಟ್ರೇಟರಿಗೆ, ನ್ಯಾಯದ ಕಾರಣವನ್ನು ಕಂಡುಕೊಳ್ಳಲು ಹಾಗೆ ಮಾಡುವುದು ಅಗತ್ಯವಾದರೆ, ಸಂಹಿತೆಯ 173(8)ನೇ ಪ್ರಕರಣದ ಅಡಿಯಲ್ಲಿ ಅಂತಿಮ ವರದಿಯನ್ನು ಸಲ್ಲಿಸಿದ ತರುವಾಯವೂ, ಹೆಚ್ಚಿನ ತನಿಖೆಯನ್ನು ಅವರು ಪುನರಾರಂಭಿಸಬಹುದು. ಆದುದರಿಂದ, ಈ ಪ್ರಕರಣವು, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಕೋರಿದಂತೆ ವಿಚಾರಣೆಯ ಅವಧಿಯಲ್ಲಿ ಪ್ರಾಸಿಕ್ಯೂಷನ್ ಸಮರ್ಥನೆಯಲ್ಲಿ ಹೆಚ್ಚಿನ ಸಾಕ್ಷ್ಯವನ್ನು ಹಾಜರುಪಡಿಸುವುದರಿಂದ ಅದನ್ನು ನಿರ್ಬಂಧಿಸಬೇಕೆಂದು ಅರ್ಥೈಸಲಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ, ಸಂಹಿತೆಯ 242(3)ನೇ ಪ್ರಕರಣದ ಪರಿಭಾಷೆಯು, ಪ್ರಾಸಿಕ್ಯೂಷನ್ ಸಮರ್ಥನೆಯಲ್ಲಿ, ಅದು ಹಾಜರುಪಡಿಸಿದ ಎಲ್ಲಾ ಸಾಕ್ಷ್ಯವನ್ನು ತೆಗೆದುಕೊಳ್ಳಲು ಮ್ಯಾಜಿಸ್ಟ್ರೇಟರಲ್ಲಿ ಅಧಿಕಾರವನ್ನು ನಿಹಿತಗೊಳಿಸಲು ಪರ್ಯಾಪ್ತವಾಗಿದೆ. ಆದುದರಿಂದ, ಪ್ರಶ್ನಿತ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ನನಗೆ ಯಾವುದೇ ನ್ಯಾಯೋಚಿತ ಕಾರಣವು ಕಂಡುಬರುತ್ತಿಲ್ಲ.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. (2017)4 ಎಸ್‌ಸಿಸಿ 177*
*ಅಮೃತ್‌ಭಾಯಿ ಶಂಭುಭಾಯಿ ಪಟೇಲ್*
*–ವಿರುದ್ಧ– ಸುಮನ್‌ಭಾಯಿ ಕಾಂತಿಭಾಯಿ ಪಟೇಲ್*
*ಮತ್ತು ಇತರರು (ಉಲ್ಲೇ) 6*

*2. ಎಸ್.ಬಿ. ಕ್ರ.ಸಂ.ಅ.ಸಂಖ್ಯೆ: 851/2014, ದಿನಾಂಕ 5–6–2015*
*ಪ್ರಕಾಶ್ ಚಂದ್ ಬೈದ್ –ವಿರುದ್ಧ–*
*ರಾಜಸ್ಥಾನ ರಾಜ್ಯ ಮತ್ತು ಇನ್ನೊಬ್ಬರು (ಉಲ್ಲೇ) 9*

*3. ಕ್ರ.ಅ.ಸ. 6996/2015, ದಿನಾಂಕ 25–11–2015*
*ಬಿ.ಆರ್. ರುದ್ರಾಣಿ ಮತ್ತು ಇತರರು –ವಿರುದ್ಧ–*
*ಕರ್ನಾಟಕ ರಾಜ್ಯ ಚಿತ್ರದುರ್ಗ ಪಟ್ಟಣ ಪೊಲೀಸ್*
*ಠಾಣೆ ಮತ್ತು ಇನ್ನೊಬ್ಬರು (ಉಲ್ಲೇ) 10*

ಅರ್ಜಿದಾರರ ಪರ : ಶ್ರೀ ಚಂದ್ರಮೌಳಿ ಹೆಚ್.ಎಸ್., ನ್ಯಾಯವಾದಿ.
ಪ್ರತ್ಯರ್ಜಿದಾರರ ಪರ : ಶ್ರೀ ಎಸ್. ರಾಚಯ್ಯ, ಉಚ್ಚ ನ್ಯಾಯಾಲಯ ಸರ್ಕಾರಿ ನ್ಯಾಯವಾದಿ.

**ಆಜ್ಞೆ**

**ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹಾ:**

ಆರೋಪ ಪಟ್ಟಿಯ ಭಾಗವಾಗಿರದ ದಸ್ತಾವೇಜುಗಳನ್ನು, ವಿಚಾರಣೆಯನ್ನು ಪ್ರಾರಂಭಿಸಿದ ನಂತರ, ಪ್ರಾಸಿಕ್ಯೂಷನ್‌ಗಾಗಿ ಸಾಕ್ಷ್ಯದಲ್ಲಿ ಸ್ವೀಕರಿಸಬಹುದೇ? ಎಂಬುದು, ಈ ಮೊಕದ್ದಮೆಯಲ್ಲಿ ನಿರ್ಧರಿಸುವುದಕ್ಕಾಗಿ ಮುಂದಿಟ್ಟ ಪ್ರಶ್ನೆಯಾಗಿದೆ.

2. ಇದರಲ್ಲಿನ ಅರ್ಜಿದಾರರು, ಭಾರತ ದಂಡ ಸಂಹಿತೆಯ 408ನೇ ಮತ್ತು 201ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಗಳನ್ನು ಎಸಗಿದ್ದಾರೆಂದು ಆರೋಪಿಸಿ, ಅವರ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂಬ ಸಂಗತಿಗಳು ಮೇಲಿನ ಪ್ರಶ್ನೆಯನ್ನು ಎತ್ತಿವೆ. ವಿಚಾರಣೆ ಅವಧಿಯಲ್ಲಿ, ಪಟ್ಟಿಯಲ್ಲಿ ನಮೂದಿಸಿದ 17 ದಸ್ತಾವೇಜುಗಳನ್ನು ಹಾಜರುಪಡಿಸಲು ಕೋರಿ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 242(2)ನೇ ಪ್ರಕರಣದ ಅಡಿಯಲ್ಲಿ ಪ್ರಾಸಿಕ್ಯೂಷನ್ ಅರ್ಜಿ ಸಲ್ಲಿಸಿದ್ದಾರೆ. ಆರೋಪ ಪಟ್ಟಿಯನ್ನು ಸಲ್ಲಿಸುವ ಸಮಯದಲ್ಲಿ, ಅರ್ಜಿಯಲ್ಲಿ ಪಟ್ಟಿ ಮಾಡಿರುವ ಮೂಲ ದಸ್ತಾವೇಜುಗಳನ್ನು, ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ಹಾಗೂ ಹಿರಿಯ ನ್ಯಾಯಾಧೀಶರು ಮತ್ತು ಸಿಜೆಎಮ್, ಕೊಡಗು ಇವರ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿದೆ; ಆದುದರಿಂದ, ಅವುಗಳ ಜೆರಾಕ್ಸ್ ಪ್ರತಿಗಳನ್ನು ಆರೋಪ ಪಟ್ಟಿಯೊಂದಿಗೆ ಸಲ್ಲಿಸಲಾಗಿತ್ತು. ಜೆರಾಕ್ಸ್ ಪ್ರತಿಗಳು ಸಾಕ್ಷ್ಯದಲ್ಲಿ ಅಂಗೀಕಾರಾರ್ಹವಲ್ಲದೆ ಇರುವುದರಿಂದ, ಫಿರ್ಯಾದುದಾರನು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಿಂದ ಹಾಗೂ ಹಿರಿಯ ನ್ಯಾಯಾಧೀಶರು ಮತ್ತು ಸಿಜೆಎಮ್, ಕೊಡಗು ಇವರ ನ್ಯಾಯಾಲಯದಿಂದ ಮೇಲಿನ ದಸ್ತಾವೇಜುಗಳನ್ನು ಪಡೆದುಕೊಂಡಿದ್ದು, ಅವುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಕೋರಿದ್ದರು ಎಂದು ಸದರಿ ಅರ್ಜಿಯಲ್ಲಿ ಹೇಳಲಾಗಿದೆ.

3. ತನಿಖಾ ಏಜನ್ಸಿಯು, ಮೂಲ ದಸ್ತಾವೇಜುಗಳನ್ನು ಸೂಕ್ತ ಮಹಜರ್ ಮೂಲಕ ಜಫ್ತಿ ಮಾಡಿ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(8)ನೇ ಪ್ರಕರಣದ ಪರಿಭಾಷೆಯಲ್ಲಿ, ಅದರ ಪ್ರಾಥಮಿಕ ವರದಿಗೆ, ಪೂರಕ ವರದಿಯನ್ನು ಸಲ್ಲಿಸಬೇಕಿತ್ತು ಎಂದು ವಾದಿಸಿ, ದಾಖಲೆಯಲ್ಲಿನ ಮೇಲಿನ ದಸ್ತಾವೇಜುಗಳನ್ನು ಸ್ವೀಕರಿಸಲು ಇದರಲ್ಲಿನ ಅರ್ಜಿದಾರರು ತೀವ್ರ ಆಕ್ಷೇಪಣೆಯನ್ನು ಎತ್ತಿದ್ದಾರೆ. ಆರೋಪ ಪಟ್ಟಿಯೊಂದಿಗೆ, ದಿನಾಂಕ: 24.06.2010ರ ಮಹಜರ್, ಜೆರಾಕ್ಸ್ ದಸ್ತಾವೇಜುಗಳ ಜಫ್ತಿಯ ವಾಸ್ತವ ಸಂಗತಿಯನ್ನು ಬಹಿರಂಗಪಡಿಸುವುದಿಲ್ಲ; ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 242(2)ನೇ ಪ್ರಕರಣವು, ಆರೋಪ ಪಟ್ಟಿಯನ್ನು ಸಲ್ಲಿಸಿದ ನಂತರ,

ತಡವಾದ ಹಂತದಲ್ಲಿ ದಸ್ತಾವೇಜುಗಳನ್ನು ಸಲ್ಲಿಸಲು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ಅವಕಾಶ ನೀಡುವುದಿಲ್ಲ; ಎಲ್ಲಾ ಸುಸಂಗತ ದಸ್ತಾವೇಜುಗಳನ್ನು ಆರೋಪ ಪಟ್ಟಿಯೊಂದಿಗೆ ಹಾಜರುಪಡಿಸಬೇಕೆಂದು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(8)ನೇ ಪ್ರಕರಣವು ನಿಯಮಿಸುತ್ತದೆ; ಆದುದರಿಂದ, ವಿಚಾರಣೆ ಅವಧಿಯಲ್ಲಿ ಪ್ರಸ್ತಾವಿಸಿದ ದಸ್ತಾವೇಜುಗಳನ್ನು ಹಾಜರುಪಡಿಸಲು ಪ್ರಾಸಿಕ್ಯೂಷನ್‌ಗೆ ಅವಕಾಶವಿರುವುದಿಲ್ಲ ಎಂದು ವಾದಿಸಲಾಗಿದೆ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(8)ನೇ ಪ್ರಕರಣದ ಪ್ರಕಾರ, ಹೆಚ್ಚಿನ ತನಿಖೆ ನಡೆಸಲು ನ್ಯಾಯಾಲಯದಿಂದ ಅಗತ್ಯ ಅನುಮತಿ ಪಡೆಯಲು ಪ್ರಾಸಿಕ್ಯೂಷನ್‌ಗೆ ಸೂಕ್ತ ಅವಧಿ ಲಭ್ಯವಿತ್ತು ಮತ್ತು ಹೆಚ್ಚಿನ ತನಿಖೆಯ ಅವಧಿಯಲ್ಲಿ ಹಾಗೆ ಸಂಗ್ರಹಿಸಿದ ದಸ್ತಾವೇಜುಗಳನ್ನು, ಪೂರಕ ವರದಿಯೊಂದಿಗೆ ಮಾತ್ರ ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕಿತ್ತು ಎಂದು ವಾದಿಸಲಾಗಿದೆ. ಇದಲ್ಲದೆ, ತಡವಾದ ಹಂತದಲ್ಲಿ ಹೆಚ್ಚುವರಿ ದಸ್ತಾವೇಜುಗಳನ್ನು ಹಾಜರುಪಡಿಸಲು ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡಲಾಗಿದ್ದರೆ, ಅದರ ರಕ್ಷಣೆಗೆ ಆರೋಪಿಯನ್ನು ತೊಂದರೆಗೆ ಒಳಪಡಿಸುವ ಸಾಧ್ಯತೆ ಇತ್ತು, ಹಾಗಾಗಿ ಅರ್ಜಿದಾರರು/ ಆರೋಪಿಯು ಅರ್ಜಿಯನ್ನು ತಿರಸ್ಕರಿಸಲು ಕೋರಿ ವಾದಿಸಿದ್ದಾರೆ.

4. ವಿಚಾರಣಾ ನ್ಯಾಯಾಲಯದ ಮುಂದೆ, ಎರಡೂ ಪಕ್ಷಕಾರರು ತಮ್ಮ ವಾದಗಳಿಗೆ ಸಮರ್ಥನೆಯಾಗಿ ಕೆಲವು ಪುರಾವೆಗಳನ್ನು ಅವಲಂಬಿಸಿದ್ದಾರೆ. ಸದರಿ ನಿರ್ಣಯಗಳಲ್ಲಿ ವಿಧಿಸಿದ ಕಾನೂನಿನ ಸ್ಥಾನಮಾನವನ್ನು ಪರಿಗಣಿಸಿ, ವಿಚಾರಣಾ ನ್ಯಾಯಾಲಯವು, ವಿಚಾರಣೆಗೆ ಒಳಗಾದ ಯಾವ ಪಕ್ಷಕಾರರಿಗೂ, ಅಜಾಗರೂಕತೆಯಿಂದ ದಾಖಲೆಯಲ್ಲಿ ತರಲಾಗದ ಸುಸಂಗತ ಸಾಕ್ಷ್ಯಗಳನ್ನು ಹಾಜರುಪಡಿಸಲು ಅವಕಾಶವನ್ನು ನಿರಾಕರಿಸಲಾಗದು ಎಂದು ಅಭಿಪ್ರಾಯಪಟ್ಟಿದೆ ಮತ್ತು ಇದಲ್ಲದೆ, ಸಾಕ್ಷಿದಾರರನ್ನು ಪಾಟಿ ಸವಾಲು ಮಾಡಲು ಮತ್ತು ಸಾಕ್ಷ್ಯವನ್ನು ಅಲ್ಲಗಳೆಯಲು ಲಭ್ಯವಿರಬಹುದಾದ ಹೆಚ್ಚಿನ ಅವಕಾಶವಾಗಿ ರಕ್ಷಣೆಗೆ ಯಾವುದೇ ಬಾಧಕವನ್ನುಂಟು ಮಾಡುವುದಿಲ್ಲವೆಂದು ನಿರ್ಣಯಿಸಿ, ದಿನಾಂಕ: 11.04.2017ರ ಪ್ರಶ್ನಿತ ಆದೇಶದ ಮೂಲಕ, ಮೇಲಿನ ಅರ್ಜಿ ಸಲ್ಲಿಸಲು ಅವಕಾಶ ನೀಡಿದೆ ಮತ್ತು ಪ್ರಸ್ತಾವಿತ ದಸ್ತಾವೇಜುಗಳನ್ನು

ಹಾಜರುಪಡಿಸಲು ಹಾಗೂ ಅದನ್ನು ಪಿಡಬ್ಲ್ಯು.1 ಮೂಲಕ ಸಾಕ್ಷ್ಯವಾಗಿ ಗುರುತಿಸಲು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದೆ.

5. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಮತ್ತು ಉಚ್ಚ ನ್ಯಾಯಾಲಯದ ಸರ್ಕಾರಿ ನ್ಯಾಯವಾದಿಗಳ ವಾದವನ್ನು ನಾನು ಆಲಿಸಿದ್ದೇನೆ.

6. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಕೆಳ ನ್ಯಾಯಾಲಯದ ಮುಂದೆ ವಾದಿಸಿದ ವಾದಗಳನ್ನು ಪುನರುಚ್ಚರಿಸಿದ್ದಾರೆ ಮತ್ತು ***ಅಮೃತ್‌ಭಾಯಿ ಶಂಭುಭಾಯಿ ಪಟೇಲ್ –ವಿರುದ್ಧ– ಸುಮನ್‌ಭಾಯಿ ಕಾಂತಿಭಾಯಿ ಪಟೇಲ್ ಮತ್ತು ಇತರರು***[1] ಮೊಕದ್ದಮೆಯಲ್ಲಿ, ಭಾರತದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿರುವುದು, ಸಂಹಿತೆಯ 173(5)ನೇ ಪ್ರಕರಣದ ಪ್ರಕಾರ ನ್ಯಾಯಾಲಯದ ಮುಂದೆ ಅಂತಿಮ ವರದಿಯನ್ನು ಒಮ್ಮೆ ಸಲ್ಲಿಸಿದ ನಂತರ, ಹೆಚ್ಚುವರಿ ದಸ್ತಾವೇಜುಗಳ ರೂಪದಲ್ಲಿ ಹೆಚ್ಚುವರಿ ವಿಷಯವನ್ನು ಮಂಡಿಸಲು ಪ್ರಾಸಿಕ್ಯೂಷನ್‌ಗೆ ಇರುವ ಒಂದೇ ಅವಕಾಶವೆಂದರೆ, ಹೆಚ್ಚಿನ ತನಿಖೆಗಾಗಿ ಮಾನ್ಯ ಮ್ಯಾಜಿಸ್ಟ್ರೇಟರ ಮೌಖಿಕ ಅಥವಾ ದಾಖಲೆ ಆಧಾರಿತ ಅನುಮತಿ ಪಡೆದು, ತರುವಾಯ ಹೆಚ್ಚಿನ ಸಾಕ್ಷ್ಯವನ್ನು ಸಂಗ್ರಹಿಸುವುದು ಮತ್ತು ಅದನ್ನು, ಪೂರಕ ಆರೋಪ ಪಟ್ಟಿಯ ರೂಪದಲ್ಲಿ ಮಾನ್ಯ ಮ್ಯಾಜಿಸ್ಟ್ರೇಟರಿಗೆ ಕಳುಹಿಸುವುದು ಎಂದು ತಿಳಿಸುತ್ತದೆ; ಅದನ್ನು ಮಾಡದೆ ಇದ್ದರೆ, ಪ್ರಾಸಿಕ್ಯೂಷನ್, ಫಿರ್ಯಾದುದಾರರಿಂದ ದಸ್ತಾವೇಜುಗಳನ್ನು ನೇರವಾಗಿ ಸಂಗ್ರಹಿಸಲಾಗುವುದಿಲ್ಲ ಮತ್ತು ಆ ದಸ್ತಾವೇಜುಗಳು ಆರೋಪ ಪಟ್ಟಿಯ ಭಾಗವಾಗಿದ್ದವು ಎಂಬಂತೆ ಅವುಗಳನ್ನು ನ್ಯಾಯಾಲಯದ ಮುಂದೆ ಮಂಡಿಸಲಾಗುವುದಿಲ್ಲ ಎಂದು ವಾದಿಸಿದ್ದಾರೆ. ಪ್ರಸ್ತುತ ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್ ಅನುಸರಿಸಿದ ಕ್ರಮವು, ಸಾಮಾನ್ಯವಾಗಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173ನೇ ಪ್ರಕರಣದ ಮತ್ತು ನಿರ್ದಿಷ್ಟವಾಗಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(8)ನೇ ಪ್ರಕರಣದ ಉಪಬಂಧಗಳಿಗೆ ವಿರುದ್ಧವಾಗಿದೆ. ತನಿಖಾ ಏಜನ್ಸಿಯು ನ್ಯಾಯಾಲಯದೊಂದಿಗೆ ಹಾಗೂ ಆರೋಪಿಯೊಂದಿಗೆ ನ್ಯಾಯಯುತವಾಗಿ

1. (2017)4 ಎಸ್‌ಸಿಸಿ 177

ನಡೆದುಕೊಳ್ಳಬೇಕಾದ ಅಗತ್ಯವಿದೆ. ಈ ಸಂದರ್ಭದಲ್ಲಿ, ವಿಚಾರಣೆ ಪ್ರಾರಂಭವಾದ ನಂತರ ದಸ್ತಾವೇಜುಗಳ ರಾಶಿಯನ್ನೇ ಹಾಜರುಪಡಿಸಲು ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡಲಾಗಿದೆ ಮತ್ತು ಅದೂ ಸಹ, ಫಿರ್ಯಾದುದಾರರನ್ನು ಪರೀಕ್ಷೆಗೆ ಒಳಪಡಿಸಿದ ನಂತರ ಅವಕಾಶ ನೀಡಲಾಗಿದೆ; ಇದು ಆರೋಪಿಯ ರಕ್ಷಣೆಗೆ ಬಾಧಕ ಮಾತ್ರವಲ್ಲದೆ, ನ್ಯಾಯಾಲಯದ ಮುಂದೆ ಹಾಜರುಪಡಿಸಿದ ವಿಷಯಗಳನ್ನು ಕುರಿತು ಪ್ರಶ್ನಿಸುವಲ್ಲಿ ಆರೋಪಿಗೆ ಒದಗಿಸಿರುವ ಕಾನೂನಿನ ಹಕ್ಕಿನಿಂದ ಸಹ ವಂಚಿತನನ್ನಾಗಿಸುತ್ತದೆ.

7. ಮೇಲಿನ ವಾದಗಳಿಗೆ ಉತ್ತರ ನೀಡಿ, ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ರಾಸಿಕ್ಯೂಷನ್ ಅವರು, ಹಾಜರುಪಡಿಸಬೇಕೆಂದು ಕೋರಲಾಗಿರುವ ದಸ್ತಾವೇಜುಗಳು, ಈಗಾಗಲೇ ಆರೋಪ ಪಟ್ಟಿಯೊಂದಿಗೆ ಸಲ್ಲಿಸಲಾಗಿರುವ ಮೂಲ ದಸ್ತಾವೇಜುಗಳ ಜೆರಾಕ್ಸ್ ಪ್ರತಿಗಳು ಮಾತ್ರವಾಗಿದ್ದು, ಆದುದರಿಂದ, ಸದರಿ ದಸ್ತಾವೇಜುಗಳನ್ನು ದಾಖಲೆಗೆ ತರುವ ಮೂಲಕ ಪ್ರತಿವಾದಕ್ಕೆ ಯಾವ ಬಾಧಕವನ್ನುಂಟು ಮಾಡುವುದಿಲ್ಲ ಎಂಬ ಅಂಶಕ್ಕೆ ಒತ್ತು ನೀಡಲು ಈ ಮುಂದಿನ ಆಧಾರಗಳನ್ನು ಅವಲಂಬಿಸಿದ್ದಾರೆ. ಈ ಕೆಳಗಿನ ಮೊಕದ್ದಮೆಗಳಲ್ಲಿ ತೀರ್ಪುಗಳನ್ನು ಉಲ್ಲೇಖಿಸಲಾಗಿದೆ:

(1) ***ಪ್ರಕಾಶ್ ಚಂದ್ ಬೈದ್ –ವಿರುದ್ಧ– ರಾಜಸ್ಥಾನ ರಾಜ್ಯ ಮತ್ತು ಇನ್ನೊಬ್ಬರು*** *ಎಸ್.ಬಿ. ಕ್ರಿಮಿನಲ್ ಸಂಕೀರ್ಣ ಅರ್ಜಿ ಸಂಖ್ಯೆ: 851/2014, ದಿನಾಂಕ: 05.06.2015*

(2) ***ಸಲ್ಮಾನ್ ಖಾನ್ –ವಿರುದ್ಧ– ರಾಜಸ್ಥಾನ ರಾಜ್ಯ*** ಎಸ್.ಬಿ. ಕ್ರಿಮಿನಲ್ ಸಂಕೀರ್ಣ ಅರ್ಜಿ ಸಂಖ್ಯೆ: 606/2015, ದಿನಾಂಕ: 10.04.2015

8. ನ್ಯಾಯಾಲಯದಲ್ಲಿ ಸಲ್ಲಿಸಿದ ದಾಖಲೆಗಳನ್ನು ನಾನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ. ಹಾಜರುಪಡಿಸಲು ಉದ್ದೇಶಿಸಿರುವ ದಸ್ತಾವೇಜುಗಳು, ಈಗಾಗಲೇ ಆರೋಪ ಪಟ್ಟಿಯೊಂದಿಗೆ ಹಾಜರುಪಡಿಸಿರುವ ಮೂಲ ದಸ್ತಾವೇಜುಗಳ ಜೆರಾಕ್ಸ್ ಪ್ರತಿಗಳು ಎಂಬ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ರಾಸಿಕ್ಯೂಷನ್ ಅವರ

ವಾದವನ್ನು ಸಾರಾಸಗಟಾಗಿ ತಳ್ಳಿಹಾಕಬೇಕಾಗುತ್ತದೆ. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಜಪ್ತಿ ಮಹಜರ್‌ಗಳನ್ನು ಮತ್ತು ರುಜುವಾತುಪಡಿಸಲು ಆರೋಪ ಪಟ್ಟಿಗೆ ಲಗತ್ತಿಸಿದ ದಸ್ತಾವೇಜುಗಳ ಪಟ್ಟಿಯನ್ನು ಉಲ್ಲೇಖಿಸಿ ಗಮನ ಸೆಳೆದಿದ್ದರೂ, ಈಗ ಹಾಜರುಪಡಿಸಬೇಕೆಂದು ಕೋರಲಾಗಿರುವ 17 ದಸ್ತಾವೇಜುಗಳ ಜೆರಾಕ್ಸ್ ಪ್ರತಿಗಳು, ತನಿಖಾವಧಿಯಲ್ಲಿ ಜಪ್ತಿ ಮಾಡಿದವುಗಳಲ್ಲ ಎಂಬುದರ ಕಡೆಗೆ ಅವರು ಗಮನ ಸೆಳೆದಿದ್ದಾರೆ. ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ರಾಸಿಕ್ಯೂಷನ್ ಅವರು, ಈ ಎಲ್ಲಾ ದಸ್ತಾವೇಜುಗಳ ಪ್ರತಿಗಳನ್ನು ವಾಸ್ತವವಾಗಿ ತನಿಖಾವಧಿಯಲ್ಲಿ ಜಪ್ತಿ ಮಾಡಲಾಗಿತ್ತು ಎಂದು ತೋರಿಸಲು, ಜಪ್ತಿ ಮಹಜರ್‌ಗಳು ಅಥವಾ ಆರೋಪ ಪಟ್ಟಿ ಕಾಗದಪತ್ರಗಳನ್ನು ಉಲ್ಲೇಖಿಸಿ ಸದರಿ ವಾದಕ್ಕೆ ಪ್ರತಿವಾದ ಮಂಡಿಸಲು ಅಸಮರ್ಥರಾಗಿದ್ದಾರೆ. ಮಾನ್ಯ ಮ್ಯಾಜಿಸ್ಟ್ರೇಟರು ಸಹ, ಈ ವಾಸ್ತವ ಅಂಶದ ಕಡೆಗೆ ತಮ್ಮ ಗಮನ ಹರಿಸಿರುವುದಿಲ್ಲ. ಪ್ರಶ್ನಿತ ಆದೇಶದ ಓದುವಿಕೆಯಿಂದ, ಮಾನ್ಯ ಮ್ಯಾಜಿಸ್ಟ್ರೇಟರು, ಈ ಎಲ್ಲಾ ದಸ್ತಾವೇಜುಗಳ ಜೆರಾಕ್ಸ್ ಪ್ರತಿಗಳನ್ನು ತನಿಖಾವಧಿಯಲ್ಲಿ ಜಪ್ತಿ ಮಾಡಲಾಗಿದೆ ಎಂಬ ಊಹೆಯ ಮೇಲೆ ಮುಂದುವರಿದಿದ್ದಾರೆ. 16ನೇ ಕಂಡಿಕೆಯಲ್ಲಿ ಮಾನ್ಯ ಮ್ಯಾಜಿಸ್ಟ್ರೇಟರು ದಾಖಲಿಸಿದ ನಿರ್ಣಯಗಳಿಂದ ಇದು ರುಜುವಾತಾಗುತ್ತದೆ. ಅದು ಈ ಮುಂದಿನಂತಿದೆ:

> "ಮೇಲೆ ಹೇಳಿದಂತೆ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 242(2)ನೇ ಪ್ರಕರಣವು, ತರುವಾಯದ ಹಂತದಲ್ಲಿ ಹಾಜರುಪಡಿಸಲು ಜಪ್ತಿ ಮಾಡಿರದ ದಸ್ತಾವೇಜುಗಳನ್ನು ಹಾಜರುಪಡಿಸಲು ವಿಫುಲ ಅಧಿಕಾರವನ್ನು ಒದಗಿಸುತ್ತದೆಯಾದ್ದರಿಂದ, ಪೂರಕ ವರದಿಯನ್ನು ಸಲ್ಲಿಸಲು ತನಿಖಾ ಏಜನ್ಸಿಯ ಬೆಂಬಲ ಕೋರುವುದು ಪ್ರಾಸಿಕ್ಯೂಷನ್‌ಗೆ ಅಗತ್ಯವಾಗಿರುವುದಿಲ್ಲ."

ಈ ನಿರ್ಣಯವು, ಹಾಜರುಪಡಿಸಬೇಕೆಂದು ಈಗ ಕೋರಿದ ಯಾವುವೇ ದಸ್ತಾವೇಜುಗಳು ಆರೋಪ ಪಟ್ಟಿಯ ದಾಖಲೆಗಳ ಭಾಗವಾಗಿರಲಿಲ್ಲ ಎಂದು

ಪೂರ್ವಕಲ್ಪನೆ ಮಾಡುತ್ತದೆ. ಆದುದರಿಂದ, ಪರಿಗಣನೆಗಾಗಿ ಉದ್ಭವಿಸುವ ಒಂದೇ ಪ್ರಶ್ನೆ ಎಂದರೆ, ವಿಚಾರಣೆ ಪ್ರಾರಂಭವಾದ ನಂತರ ಹೊಸ ದಸ್ತಾವೇಜುಗಳನ್ನು ಹಾಜರುಪಡಿಸಲು ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡಬಹುದೇ ಅಥವಾ ಇಲ್ಲವೆ ಎಂಬುದಾಗಿದೆ.

9. ಈ ಪ್ರಶ್ನೆಯ ಆಧಾರದ ಮೇಲೆ, ರಾಜಸ್ಥಾನ ಉಚ್ಚ ನ್ಯಾಯಾಲಯವು, ***ಪ್ರಕಾಶ್ ಚಂದ್ ಬೈದ್ –ವಿರುದ್ಧ– ರಾಜಸ್ಥಾನ ರಾಜ್ಯ ಮತ್ತು ಇನ್ನೊಬ್ಬರು***[2] ಮೊಕದ್ದಮೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ರಾಸಿಕ್ಯೂಷನ್ ಅವರು ಅವಲಂಬಿಸಿದ ತೀರ್ಪಿನಲ್ಲಿ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 91ನೇ ಪ್ರಕರಣದ ಮೇರೆಗೆ, ದಸ್ತಾವೇಜುಗಳನ್ನು ಹಾಜರುಪಡಿಸುವುದರ ಸಂಬಂಧದಲ್ಲಿ ನ್ಯಾಯಾಲಯವು ಸಮನ್‌ಗಳನ್ನು ನೀಡಲು ಅಧಿಕಾರ ಹೊಂದಿದೆ; ಆದುದರಿಂದ, ಆರೋಪ ಪಟ್ಟಿಯೊಂದಿಗೆ ಅವಶ್ಯಕ ದಸ್ತಾವೇಜುಗಳನ್ನು ಹಾಜರುಪಡಿಸಿರಲಿಲ್ಲ ಎಂಬ ಸಂಗತಿಯ ಹೊರತಾಗಿಯೂ, ಮೊಕದ್ದಮೆಯ ಸೂಕ್ತ ವಿಲೆಗಾಗಿ ಅವುಗಳನ್ನು ಹಾಜರುಪಡಿಸಲು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ನ್ಯಾಯಾಲಯಕ್ಕೆ ಯಾವುದೇ ನಿರ್ಬಂಧವಿರಬಾರದು ಎಂದು ಅಭಿಪ್ರಾಯಪಡಲಾಗಿದೆ.

10. ಮೇಲಿನ ಕಾರಣ ನೀಡಿದುದಕ್ಕೆ ವಿರುದ್ಧವಾಗಿ, ***ಬಿ.ಆರ್. ರುದ್ರಾಣಿ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ ಚಿತ್ರದುರ್ಗ ಪಟ್ಟಣ ಪೊಲೀಸ್ ಠಾಣೆ ಮತ್ತು ಇನ್ನೊಬ್ಬರು***[3] ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರು, ಕ್ರಿಮಿನಲ್ ಅರ್ಜಿ ಸಂಖ್ಯೆ: 6996/2015, ದಿನಾಂಕ: 25.11.2015ರಲ್ಲಿ ಈ ಕೆಳಗಿನಂತೆ ತೀರ್ಪು ನೀಡಿದ್ದಾರೆ:

> "ಹಾಗಾಗಿ, ಪ್ರಾಸಿಕ್ಯೂಷನ್ ಹಾಜರುಪಡಿಸಬೇಕಾದ ದಸ್ತಾವೇಜುಗಳನ್ನು, ತನಿಖಾಧಿಕಾರಿಯು ತನಿಖಾ ಅವಧಿಯಲ್ಲಿ

1. ಎಸ್.ಬಿ. ಕ್ರಿಮಿನಲ್ ಸಂಕೀರ್ಣ ಅರ್ಜಿ ಸಂಖ್ಯೆ: 851/2014, ದಿನಾಂಕ: 05.06.2015
2. ಎಸ್.ಬಿ. ಕ್ರಿಮಿನಲ್ ಸಂಕೀರ್ಣ ಅರ್ಜಿ ಸಂಖ್ಯೆ: 6996/2015, ದಿನಾಂಕ: 25.11.2015

> ಸಂಗ್ರಹಿಸಿರಲಿಲ್ಲ ಅಥವಾ ಅವರು ಮುಂದಿನ ತನಿಖೆಯನ್ನು ಕೈಗೊಳ್ಳಲು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(8)ನೇ ಪ್ರಕರಣದ ಅಡಿಯಲ್ಲಿ ಅನುಮತಿಯನ್ನು ಪಡೆದುಕೊಂಡಿರಲಿಲ್ಲ. ಪ್ರಾಸಿಕ್ಯೂಷನ್ ಮೊಕದ್ದಮೆಯಲ್ಲಿನ ಕೊರತೆಗಳನ್ನು ತುಂಬಲು, ಫಿರ್ಯಾದುದಾರನ ಅಭಿರಕ್ಷೆಯಲ್ಲಿರುವ ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕೆ ಅನುಮತಿ ನೀಡಲಾಗದು ಮತ್ತು ಇದು ಸ್ಥಾಪಿತ ಪ್ರಕ್ರಿಯೆಗೆ ವಿರುದ್ಧವಾದುದಾಗಿದೆ."

11. ನನ್ನ ಪರಿಗಣಿತ ಅಭಿಪ್ರಾಯದಲ್ಲಿ, ಮೇಲಿನ ಪ್ರಶ್ನೆಗೆ ಉತ್ತರವನ್ನು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 242(3)ನೇ ಪ್ರಕರಣದಲ್ಲಿ ಒದಗಿಸಲಾಗಿದೆ. ಮ್ಯಾಜಿಸ್ಟ್ರೇಟರ ವಾರಂಟು ಮೊಕದ್ದಮೆಗಳ ವಿಚಾರಣೆ ಕುರಿತು ವ್ಯವಹರಿಸುವ ಸಂಹಿತೆಯ ಅಧ್ಯಾಯ–XIXರಲ್ಲಿ ಈ ಪ್ರಕರಣವು ಇದೆ. 242ನೇ ಪ್ರಕರಣವು ಪ್ರಾಸಿಕ್ಯೂಷನ್ ಸಾಕ್ಷ್ಯ ಕುರಿತು ನಿರ್ದಿಷ್ಟವಾಗಿ ಉಲ್ಲೇಖಿಸುತ್ತದೆ. ಮಾನ್ಯ ಮ್ಯಾಜಿಸ್ಟ್ರೇಟರ ಮುಂದೆ ಪ್ರಾಸಿಕ್ಯೂಷನ್ ಪರಿಹಾರವನ್ನು ಕೋರುವುದರೊಂದಿಗೆ ಸದರಿ ಉಪಬಂಧವು ನೇರ ಸಂಬಂಧ ಹೊಂದಿರುವುದರಿಂದ, ಈ ಅರ್ಜಿಯಲ್ಲಿ ಎತ್ತಿದ ವಾದದ ಮೇಲೆ ಅದು ಬೆಳಕು ಚೆಲ್ಲುವುದರಿಂದ, ಪ್ರಕರಣವನ್ನು ಉದ್ಧೃತಗೊಳಿಸಲು ಸಮಂಜಸವಿರಬಹುದು. ಅದನ್ನು ಈ ಮುಂದಿನಂತೆ ಓದಲಾಗಿದೆ:

> **"242. ಪ್ರಾಸಿಕ್ಯೂಷನ್ ಪರ ಸಾಕ್ಷ್ಯ.–**
>
> *(1) ಆಪಾದಿತನು ವಾದಿಸಲು ನಿರಾಕರಿಸಿದರೆ ಅಥವಾ ವಾದಿಸದಿದ್ದರೆ, ಅಥವಾ ಆರೋಪದ ವಿಚಾರಣೆಯಾಗಬೇಕೆಂದು ಕ್ಲೇಮು ಮಾಡಿದರೆ ಅಥವಾ 241ನೇ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟರು ಅವನನ್ನು ಅಪರಾಧಿಯೆಂದು ನಿರ್ಣಯಿಸಿದ್ದರೆ, ಮ್ಯಾಜಿಸ್ಟ್ರೇಟರ ಸಾಕ್ಷಿಗಳ ವಿಚಾರಣೆಗಾಗಿ ಒಂದು ದಿನಾಂಕವನ್ನು ಗೊತ್ತು ಮಾಡತಕ್ಕದ್ದು.*

*(2) ಮ್ಯಾಜಿಸ್ಟ್ರೇಟರು, ಪ್ರಾಸಿಕ್ಯೂಷನ್ನಿನ ಆವೇದನದ ಮೇಲೆ, ಅದರ ಯಾವುದೇ ಸಾಕ್ಷಿಗೆ ಹಾಜರಾಗುವಂತೆ ಅಥವಾ ಯಾವುದೇ ದಸ್ತಾವೇಜನ್ನು ಅಥವಾ ಇತರ ವಸ್ತುವನ್ನು ಹಾಜರುಪಡಿಸುವಂತೆ ನಿರ್ದೇಶಿಸುವ ಒಂದು ಸಮನನ್ನು ಹೊರಡಿಸಬಹುದು.*

*(3) ಹಾಗೆ ಗೊತ್ತುಮಾಡಿದ ದಿನಾಂಕದಂದು, ಪ್ರಾಸಿಕ್ಯೂಷನ್ನಿನ ಸಮರ್ಥನೆಗಾಗಿ ಹಾಜರುಪಡಿಸಬಹುದಾದಂಥ ಎಲ್ಲ ಸಾಕ್ಷ್ಯವನ್ನು ಮ್ಯಾಜಿಸ್ಟ್ರೇಟರು ತೆಗೆದುಕೊಳ್ಳಲು ಉದ್ಯುಕ್ತರಾಗತಕ್ಕದ್ದು:*

*ಪರಂತು, ಯಾರೇ ಇತರ ಸಾಕ್ಷಿಯನ್ನು ಅಥವಾ ಸಾಕ್ಷಿಗಳನ್ನು ವಿಚಾರಣೆ ಮಾಡುವವರೆಗೆ, ಯಾರೇ ಇತರ ಸಾಕ್ಷಿಯ ಪಾಟಿ ಸವಾಲನ್ನು ಮುಂದೂಡಲು ಮ್ಯಾಜಿಸ್ಟ್ರೇಟರು ಅನುಮತಿ ನೀಡಬಹುದು ಅಥವಾ ಮತ್ತಷ್ಟು ಪಾಟಿ ಸವಾಲಿಗಾಗಿ ಯಾರೇ ಸಾಕ್ಷಿಯನ್ನು ಕರೆಯಬಹುದು."*

12. ಮೇಲಿನ ಪ್ರಕರಣದಿಂದ ಕಂಡುಬರುವಂತೆ, (3)ನೇ ಉಪ–ಪ್ರಕರಣವು, ಪ್ರಾಸಿಕ್ಯೂಷನ್‌ಗೆ ಸಮರ್ಥನೆಯಾಗಿ ಹಾಜರುಪಡಿಸಬಹುದಾದಂಥ ಎಲ್ಲಾ ಸಾಕ್ಷ್ಯವನ್ನು ತೆಗೆದುಕೊಳ್ಳಬೇಕು. ಈ ಉಪ–ಪ್ರಕರಣದಲ್ಲಿ "ಅಂಥ ಎಲ್ಲಾ ಸಾಕ್ಷ್ಯ" ಎಂಬ ಭಾಷೆಯ ಬಳಕೆಯ ಅರ್ಥ, ನ್ಯಾಯಾಲಯವು ಪ್ರಾಸಿಕ್ಯೂಷನ್ ಮೊಕದ್ದಮೆಯ ಸಮರ್ಥನೆಯಾಗಿ ಅದು ಹಾಜರುಪಡಿಸಬಹುದಾಗಿರುವ ಎಲ್ಲಾ ಅಂಥ ಸಾಕ್ಷ್ಯವನ್ನು ತೆಗೆದುಕೊಳ್ಳಬೇಕು ಅಥವಾ ಸ್ವೀಕರಿಸಬೇಕು ಎಂಬುದಾಗಿದೆ. ಈ ಪ್ರಕರಣದಲ್ಲಿ ಬಳಸಿದ ಭಾಷೆಯ ವ್ಯಾಪಕತೆಯನ್ನು ಗಮನದಲ್ಲಿರಿಸಿಕೊಂಡು, "ಅಂಥ ಎಲ್ಲಾ ಸಾಕ್ಷ್ಯ" ಎಂಬ ಅಭಿವ್ಯಕ್ತಿಗೆ, ಪೊಲೀಸರು ಪರೀಕ್ಷಿಸಿರುವಂಥ ವ್ಯಕ್ತಿಗಳಿಗೆ ಸಂಬಂಧಿಸಿದಂತೆ, ಅಂಥ ಸಾಕ್ಷ್ಯವನ್ನು ಮಾತ್ರ ಅಥವಾ ತನಿಖೆಯ ಅವಧಿಯಲ್ಲಿ ಸಂಗ್ರಹಿಸಿದ ದಸ್ತಾವೇಜುಗಳನ್ನು ಮಾತ್ರ ನ್ಯಾಯಾಲಯದ ಮುಂದೆ ಹಾಜರುಪಡಿಸಬಹುದು ಎಂದು ನಿರ್ಣಯಿಸುವ ಹಾಗೆ ನಿರ್ಬಂಧಿತ ಅರ್ಥವನ್ನು

ನೀಡಲಾಗುವುದಿಲ್ಲ. ಅಂಥ ನಿರ್ಬಂಧಿತ ರೀತಿಯಲ್ಲಿ ಪ್ರಕರಣವನ್ನು ಓದುವುದು, ಅಲ್ಲಿ ಏನೂ ಇಲ್ಲವೆಂಬಂತೆ ಉಪ–ಪ್ರಕರಣವನ್ನು ಓದುವುದಕ್ಕೆ ಸಮವಾಗುತ್ತದೆ. ಹಾಗಿಲ್ಲದಿದ್ದಾಗ್ಯೂ, ನಿಖರವಾಗಿ "ಸಾಕ್ಷ್ಯ" ಎಂಬ ಪದವು ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯ ಎಂದು ಅರ್ಥ ಕೊಡುತ್ತದೆ. ಸಾಕ್ಷ್ಯ ಅಧಿನಿಯಮದ 3ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ, "ಸಾಕ್ಷ್ಯ ಇದರ ಅರ್ಥ ಈ ಮುಂದಿನಂತಿದೆ ಮತ್ತು ಅವುಗಳನ್ನು ಒಳಗೊಳ್ಳುತ್ತದೆ – (1) ವಿಚಾರಣೆಯಲ್ಲಿರುವ ವಾಸ್ತವ ವಿಷಯಗಳ ಸಂಬಂಧದಲ್ಲಿ, ನ್ಯಾಯಾಲಯವು ಅನುಮತಿ ನೀಡುವ ಅಥವಾ ಸಾಕ್ಷಿಯ ಮೂಲಕ ಅದರ ಮುಂದೆ ಮಂಡಿಸಬೇಕೆಂದು ಅಗತ್ಯಪಡಿಸುವ ಎಲ್ಲಾ ಹೇಳಿಕೆಗಳು – ಇಂಥ ಹೇಳಿಕೆಗಳನ್ನು ಮೌಖಿಕ ಸಾಕ್ಷ್ಯ ಎಂದು ಕರೆಯಲಾಗುತ್ತದೆ; (2) (ನ್ಯಾಯಾಲಯದ ಪರಿಶೀಲನೆಗಾಗಿ ಹಾಜರುಪಡಿಸಲಾಗುವ ವಿದ್ಯುನ್ಮಾನ ದಾಖಲೆಗಳನ್ನು ಒಳಗೊಂಡು ಎಲ್ಲಾ ದಸ್ತಾವೇಜುಗಳು) – ಇಂಥ ದಸ್ತಾವೇಜುಗಳನ್ನು ದಸ್ತಾವೇಜೀಯ ಸಾಕ್ಷ್ಯ ಎಂದು ಕರೆಯಲಾಗುತ್ತದೆ."

13. ಆದ್ದರಿಂದ, 242ನೇ ಪ್ರಕರಣದ (3)ನೇ ಉಪ–ಪ್ರಕರಣವು, ಪ್ರಾಸಿಕ್ಯೂಷನ್ ಸಮರ್ಥನೆಗಾಗಿ ಹಾಜರುಪಡಿಸಬಹುದಾದಂಥ ಎಲ್ಲಾ ಸಾಕ್ಷ್ಯಗಳನ್ನು ತೆಗೆದುಕೊಳ್ಳಲು ಮ್ಯಾಜಿಸ್ಟ್ರೇಟರ ಮೇಲೆ ಕಡ್ಡಾಯ ಕರ್ತವ್ಯವನ್ನು ಗೊತ್ತುಪಡಿಸುತ್ತದೆ. (3)ನೇ ಉಪ–ಪ್ರಕರಣದಲ್ಲಿರುವ "ಹಾಜರುಪಡಿಸಿದ" ಎಂಬ ಪದವು, ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ವಿಷಯಗಳನ್ನು ಮಾತ್ರ ಸಾಕ್ಷ್ಯವಾಗಿ ಹಾಜರುಪಡಿಸಬೇಕೆಂಬ ತೀರ್ಮಾನಕ್ಕೆ ಬರುವ ನಿರ್ಬಂಧಕ ಅರ್ಥವನ್ನು ನೀಡುವುದಿಲ್ಲ. ಇಂಥ ವ್ಯಾಖ್ಯಾನವು ವಿಚಾರಣೆಯ ಮೂಲ ಉದ್ದೇಶವನ್ನೇ ವಿಫಲಗೊಳಿಸುತ್ತದೆ. ಕ್ರಿಮಿನಲ್ ವಿಚಾರಣೆಯ ಮುಖ್ಯ ಉದ್ದೇಶ ಸತ್ಯವನ್ನು ಕಂಡುಕೊಳ್ಳುವುದಾದರೆ, ನ್ಯಾಯಾಲಯವು ಒಂದು ನ್ಯಾಯಯುತ ತೀರ್ಮಾನಕ್ಕೆ ಬರಲು ಸಹಾಯಕವಾಗುವಂಥ ಎಲ್ಲಾ ಮತ್ತು ಸಾಕ್ಷ್ಯದ ಪ್ರತಿಯೊಂದು ಭಾಗವನ್ನು ಅವಶ್ಯವಾಗಿ ದಾಖಲೆಗೆ ತೆಗೆದುಕೊಳ್ಳಲು ಅನುಮತಿ ನೀಡಬೇಕಾಗುತ್ತದೆ. ಆದುದರಿಂದ, ವಿಚಾರಣಾ ಅವಧಿಯಲ್ಲಿ ಹಾಜರುಪಡಿಸಬೇಕೆಂದು ಕೋರಿದ ಸಾಕ್ಷ್ಯವನ್ನು, ತನಿಖಾ ಅವಧಿಯಲ್ಲಿ ಸಂಗ್ರಹಿಸಿರಲಿ ಅಥವಾ ಅದರ ನಂತರದಲ್ಲಿ ಸಂಗ್ರಹಿಸಿರಲಿ,

ಅದು ಮುಖ್ಯವಾಗುವುದಿಲ್ಲ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 91ನೇ ಪ್ರಕರಣವು, ಯಾವುದೇ ತನಿಖೆ, ವಿಚಾರಣೆ ಅಥವಾ ಇತರ ಕಾನೂನು ವ್ಯವಹರಣೆಯ ಉದ್ದೇಶಕ್ಕಾಗಿ 'ಅವಶ್ಯಕವಾಗಿರಬಹುದಾದ ಅಥವಾ ಅಪೇಕ್ಷಣೀಯವಾದ' ಯಾವುದೇ ದಸ್ತಾವೇಜನ್ನು ಅಥವಾ ಇತರ ವಸ್ತುವನ್ನು', ಅಂಥ ದಸ್ತಾವೇಜು ಅಥವಾ ವಸ್ತು ಯಾರ ಸ್ವಾಧೀನದಲ್ಲಿದೆಯೋ ಅಥವಾ ಅಧಿಕಾರದಲ್ಲಿದೆಯೋ, ಆ ವ್ಯಕ್ತಿಗೆ ಸಮನು ನೀಡುವ ಮೂಲಕವಾಗಲಿ ಅಥವಾ ಲಿಖಿತ ಆದೇಶವನ್ನು ನೀಡುವ ಮೂಲಕವಾಗಲಿ ಅದರ ಮಂಡನೆಯನ್ನು ಖಚಿತಪಡಿಸಿಕೊಳ್ಳಲು, ನ್ಯಾಯಾಲಯಕ್ಕೆ ಅಥವಾ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಗೆ ಅಧಿಕಾರ ನೀಡುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ; ಆದರೆ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173ನೇ ಪ್ರಕರಣದ (5)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿರದ ದಸ್ತಾವೇಜುಗಳನ್ನು ಒಳಗೊಂಡು, ಪ್ರಾಸಿಕ್ಯೂಷನ್ ಹಾಜರುಪಡಿಸಲು ಬಯಸುವ ಎಲ್ಲಾ ಅಂಥ ದಸ್ತಾವೇಜುಗಳ ಒಂದು ಪ್ರತಿಯನ್ನು ಆರೋಪಿಗೆ ಒದಗಿಸುವ ಮತ್ತು ಅವುಗಳಿಗೆ ಸಮಜಾಯಿಸಿ ನೀಡಲು ಆತನಿಗೆ ಸೂಕ್ತ ಅವಕಾಶ ನೀಡುವ ಕ್ರಮಕ್ಕೆ ಒಳಪಟ್ಟು, ಎಲ್ಲ ಅಂಥ ಸಾಕ್ಷ್ಯಗಳನ್ನು ತೆಗೆದುಕೊಳ್ಳಲು 242(3)ನೇ ಪ್ರಕರಣವು ನ್ಯಾಯಾಲಯವನ್ನು ಅಗತ್ಯಪಡಿಸುತ್ತದೆ. ಸಾಕ್ಷ್ಯ ಅಧಿನಿಯಮದ ಉಪಬಂಧಗಳ ಅಭಿಪ್ರಾಯದಲ್ಲಿ ಯೋಚಿಸಬಹುದಾದಂಥ ಏಕೈಕ ಸುರಕ್ಷತೆ ಅಥವಾ ನಿರ್ಬಂಧವೆಂದರೆ, ಅಂಥ ಸಾಕ್ಷ್ಯವು, ವಿಚಾರಣೆಯಲ್ಲಿರುವ ವಾಸ್ತವ ವಿಷಯಕ್ಕೆ ಸಂಬಂಧಿಸಿರಬೇಕು ಎಂಬುದಾಗಿದೆ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಪ್ರಸ್ತಾವಿತ ಸಾಕ್ಷ್ಯವು, ಮೌಖಿಕ ಸಾಕ್ಷ್ಯವಾಗಿರಲಿ ಅಥವಾ ದಸ್ತಾವೇಜೀಯ ಸಾಕ್ಷ್ಯವಾಗಿರಲಿ, ಅದು ಸುಸಂಗತವಾಗಿದ್ದರೆ ಮತ್ತು ಪ್ರಾಸಿಕ್ಯೂಷನ್ ಮೊಕದ್ದಮೆಗೆ ಪೂರಕವಾಗಿದ್ದರೆ, ಮ್ಯಾಜಿಸ್ಟ್ರೇಟರು ಅದನ್ನು ಸ್ವೀಕರಿಸಲು ನಿರಾಕರಿಸುವಂತಿಲ್ಲ.

14. ಈ ಸಂದರ್ಭದ ಹಿನ್ನಲೆಯಲ್ಲಿ, ಆರೋಪಿಯ ಅಪರಾಧದ ಅಥವಾ ನಿರ್ದೋಷತೆಯ ನಿರ್ಧರಣೆಗೆ ಸುಸಂಗತವಾದ ಎಲ್ಲಾ ಸಾಕ್ಷ್ಯಗಳನ್ನು ಹಾಜರುಪಡಿಸುವ ಕರ್ತವ್ಯವು ವಿಚಾರಣೆಯನ್ನು ನಡೆಸುತ್ತಿರುವ ಪಬ್ಲಿಕ್ ಪ್ರಾಸಿಕ್ಯೂಟರ್‌ದಾಗಿರುತ್ತದೆ

ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳುವುದು ಸಹ ಸುಸಂಗತವಾದುದಾಗಿದೆ. ಆದುದರಿಂದ, ಪ್ರಾಸಿಕ್ಯೂಷನ್ ಸಮರ್ಥನೆಯಲ್ಲಿ ಎಲ್ಲಾ ಸಾಕ್ಷ್ಯವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವ ಕರ್ತವ್ಯವು ವಿಚಾರಣೆ ನಡೆಸುತ್ತಿರುವ ಪಬ್ಲಿಕ್ ಪ್ರಾಸಿಕ್ಯೂಟರ್ ಸಹ ಹೊಂದಿರುತ್ತದೆಂದು ಹೇಳದಿರಲಾಗುವುದಿಲ್ಲ. ಆದುದರಿಂದ ಪಬ್ಲಿಕ್ ಪ್ರಾಸಿಕ್ಯೂಟರ್, ಮೊಕದ್ದಮೆಯ ನ್ಯಾಯಯುತ ವಿಚಾರಣೆಗಾಗಿ ಅವಶ್ಯವೆಂದು ಕಂಡುಬರಬಹುದಾಗಿರುವ ಸಾಕ್ಷ್ಯದ ಯಾವುದೇ ಸುಸಂಗತ ಭಾಗವನ್ನು ಇಟ್ಟುಕೊಳ್ಳುವಂತಿಲ್ಲ. ಕಾನೂನಿನ ಪ್ರತಿಪಾದನೆ ಹಾಗಿರುವುದರಿಂದ ಮತ್ತು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 242(3)ನೇ ಪ್ರಕರಣದಲ್ಲಿ ಇರುವ ಕಡ್ಡಾಯ ನಿರೂಪಣೆಯಿಂದಾಗಿ, ಸದರಿ ಸಾಕ್ಷ್ಯ ಅಥವಾ ದಸ್ತಾವೇಜು, ನ್ಯಾಯಾಲಯದ ಮುಂದೆ ಸಲ್ಲಿಸಲಾದ ಆರೋಪಪಟ್ಟಿಯ ಭಾಗವಾಗಿರಲಿ ಅಥವಾ ಇಲ್ಲದಿರಲಿ, ಪ್ರಾಸಿಕ್ಯೂಷನ್ ಹಾಜರುಪಡಿಸುವ ಎಲ್ಲಾ ಸಾಕ್ಷ್ಯವನ್ನು, ವಿಚಾರಣೆ ನಡೆಸುತ್ತಿರುವ ಕ್ರಿಮಿನಲ್ ನ್ಯಾಯಾಲಯವು ಸ್ವೀಕರಿಸಲು ಬದ್ಧವಾಗಿದೆ ಎಂದು ನಿರ್ಣಯಿಸಲು ನನಗೆ ಯಾವುದೇ ಹಿಂಜರಿಕೆ ಇಲ್ಲ.

15. ***ಅಮೃತ್‌ಭಾಯಿ ಶಂಭುಭಾಯಿ ಪಟೇಲ್ –ವಿರುದ್ಧ– ಸುಮನ್‌ಭಾಯಿ ಕಾಂತಿಭಾಯಿ ಪಟೇಲ್ ಮತ್ತು ಇತರರು ಮೇಲಿನ*** ಮೊಕದ್ದಮೆಯಲ್ಲಿ, ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರೂಪಿಸಿದ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ ತೀರ್ಪು, ಸಂಪೂರ್ಣವಾಗಿ ಬೇರೆಯದೇ ಆದ ವಾಸ್ತವ ಸಂಗತಿಗಳೊಂದಿಗೆ ವ್ಯವಹರಿಸುತ್ತದೆ. ಸದರಿ ಮೊಕದ್ದಮೆಯಲ್ಲಿ, ಪ್ರಾಸಿಕ್ಯೂಷನ್ ಪರ ಸಾಕ್ಷಿದಾರರ ಮೌಖಿಕ ಸಾಕ್ಷ್ಯ ಹೇಳಿಕೆಯು ಕೊನೆಗೊಂಡ ನಂತರ ಮತ್ತು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಅಡಿಯಲ್ಲಿ ಆರೋಪಿಯನ್ನು ಪರೀಕ್ಷಿಸಿದ ನಂತರ, ಪೊಲೀಸರು ಹೆಚ್ಚಿನ ತನಿಖೆ ಕೈಗೊಳ್ಳಲು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(8)ನೇ ಪ್ರಕರಣದ ಅಡಿಯಲ್ಲಿ ನಿರ್ದೇಶನ ಕೋರಿ ಫಿರ್ಯಾದುದಾರನು ವಿಚಾರಣೆಯ ಮುಕ್ತಾಯದ ಹಂತದಲ್ಲಿ ಅರ್ಜಿಯನ್ನು ಸಲ್ಲಿಸಿದ್ದನು. ಈ ಸಂದರ್ಭದ ಹಿನ್ನಲೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು,

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 173(8)ನೇ ತಿದ್ದುಪಡಿಯಾದ ಪ್ರಕರಣದ ವ್ಯಾಪ್ತಿಯನ್ನು ಪರಿಗಣಿಸಿತ್ತು ಮತ್ತು ಸದರಿ ತೀರ್ಪಿನ 49ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ಅದು ತೀರ್ಪು ನೀಡಿದೆ:

> "49. ಸಂಹಿತೆಯ 173(8)ನೇ ಪ್ರಕರಣದ ವ್ಯಾಪ್ತಿ ಮತ್ತು ತಾತ್ಪರ್ಯದ ಹಾಗೂ ಅದರ ವ್ಯಾಖ್ಯಾನದ ನಿರಂತರ ಪುನರಾವೃತ್ತಿಯ ಆಧಾರದ ಮೇಲೆ, ಈ ನ್ಯಾಯಾಲಯದ ತೀರ್ಪುಗಳ ಉಚ್ಚರಣೆಗಳ ಸಮಗ್ರ ಸಮೀಕ್ಷೆಯ ನಂತರ, ಸಂಬಂಧಪಟ್ಟ ತನಿಖಾ ಏಜನ್ಸಿಯು ಹೆಚ್ಚಿನ ತನಿಖೆಯನ್ನು ಕೈಗೊಳ್ಳುವ ಕುರಿತು ನ್ಯಾಯಾಲಯಕ್ಕೆ ತಿಳಿಸಿದ ನಂತರ, ಅದು ಬಯಸುವಂತೆ ಹೆಚ್ಚಿನ ತನಿಖೆಯನ್ನು ಕೈಗೊಳ್ಳುವ ಅಧಿಕಾರ ಅದಕ್ಕೆ ನಿಹಿತವಾಗಿದೆಯಾದರೂ, ಅದಕ್ಕೆ ಮುಂಚೆ, ಅದರ ವರದಿಯನ್ನು ಅದು ಸಲ್ಲಿಸಿದೆ ಮತ್ತು ಅದಕ್ಕೆ ಅನುಮೋದನೆಯನ್ನು ಪಡೆದುಕೊಂಡಿದೆ. ಆದುದರಿಂದ, ಮೊದಲಿನ ವರದಿಯ ಆಧಾರದ ಮೇಲೆ ಸಂಜ್ಞೇಯತೆಯನ್ನು ತೆಗೆದುಕೊಂಡ ನಂತರ ಮಾನ್ಯ ಮ್ಯಾಜಿಸ್ಟ್ರೇಟರಿಗೆ ಅಂಥ ಅಧಿಕಾರ ಲಭ್ಯವಿರುವುದಿಲ್ಲ, ಆದೇಶಕ್ರಮವನ್ನು ಹೊರಡಿಸಿದೆ ಮತ್ತು ಅದಕ್ಕೆ ಪ್ರತಿಕ್ರಿಯೆಯಾಗಿ ಆರೋಪಿಯು ಹಾಜರಾಗಿದ್ದಾರೆ. ಆ ಹಂತದಲ್ಲಿ, ಮಾನ್ಯ ಮ್ಯಾಜಿಸ್ಟ್ರೇಟರು ಸ್ವಯಂಪ್ರೇರಿತವಾಗಿಯಾಗಲಿ ಅಥವಾ ದೂರುದಾರನು/ ಫಿರ್ಯಾದುದಾರು ಸಲ್ಲಿಸಿದ ಅರ್ಜಿಯ ಆಧಾರದ ಮೇಲಾಗಲಿ ಹೆಚ್ಚಿನ ತನಿಖೆಗೆ ನಿರ್ದೇಶಿಸಲಾಗುವುದಿಲ್ಲ. ತನಿಖಾ ಏಜನ್ಸಿಯ ಮನವಿಯ ಆಧಾರದ ಮೇಲೆ, ಅದೂ ಸಹ, ವಿಚಾರಣೆಯಲ್ಲಿರುವ ನ್ಯಾಯಿಕ ಉದ್ದೇಶಕ್ಕೆ ಜೀವ ತುಂಬುವುದನ್ನು, ನ್ಯಾಯಯುತ ತನಿಖೆ ಮತ್ತು ವಿಚಾರಣೆಯನ್ನು, ಖಾತರಿಪಡಿಸಲು ಮುಖ್ಯ ಸಾಕ್ಷ್ಯ ಪತ್ತೆಯಾದ ನಂತರ ಹೆಚ್ಚಿನ ತನಿಖೆಯನ್ನು

ಪುರಸ್ಕರಿಸುವ ಸಂದರ್ಭಗಳಲ್ಲಿ ಮಾತ್ರ ಅಂಥ ಕ್ರಮವು ಮುಕ್ತವಾಗಿರುವುದು."

16. ಈ ತೀರ್ಮಾನವು, ಈ ಪ್ರಕರಣದಲ್ಲಿ ಇರುವ ಪ್ರಶ್ನೆಯ ರುಜುವಾತಲ್ಲ. ನನ್ನ ಪರಿಗಣಿತ ಅಭಿಪ್ರಾಯದಲ್ಲಿ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 242ನೇ ಪ್ರಕರಣದ (3)ನೇ ಉಪ–ಪ್ರಕರಣದ ಅಭಿಪ್ರಾಯದಲ್ಲಿ, ಪ್ರಾಸಿಕ್ಯೂಷನ್ ಸಮರ್ಥನೆಯಲ್ಲಿ ಹಾಜರುಪಡಿಸಬಹುದಾಂಥ ಎಲ್ಲಾ ಸಾಕ್ಷ್ಯವನ್ನು ತೆಗೆದುಕೊಳ್ಳಲು ಮ್ಯಾಜಿಸ್ಟ್ರೇಟರಿಗೆ ಸಂದೇಹಕ್ಕೆ ಆಸ್ಪದವಿಲ್ಲದ ಪದಗಳಲ್ಲಿ ಅಧಿಕಾರವನ್ನು ಪ್ರದತ್ತಗೊಳಿಸಿದೆ. ಇದು, ಅಸದೃಶವಾದ ಉಪಬಂಧವಾಗಿದೆ. ಇದು, ಸಂಹಿತೆಯ 173ನೇ ಪ್ರಕರಣದಿಂದ, ನಿಯಂತ್ರಿತವಾಗಿರುವುದಿಲ್ಲ ಅದರ (8)ನೇ ಉಪ–ಪ್ರಕರಣದಿಂದ ಇನ್ನೂ ಕಡಿಮೆ ನಿಯಂತ್ರಿತವಾಗುತ್ತದೆ. ಒಟ್ಟಾರೆಯಾಗಿ ಅದು ಬೇರೆಯದೇ ವಿಷಯವನ್ನು ನಿರ್ವಹಿಸುತ್ತದೆ. ಸಂಹಿತೆಯ 173(8)ನೇ ಪ್ರಕರಣವು, ಹೆಚ್ಚಿನ ತನಿಖೆಯನ್ನು ನಡೆಸಲು, ಆರೋಪಿಯ ಅಪರಾಧದ ಆಧಾರದ ಮೇಲೆ ಲಭ್ಯವಿರುವ ಸಾಕ್ಷ್ಯವನ್ನು ಒದಗಿಸುವ ಸಂದರ್ಭದಲ್ಲಿ, ಪೊಲೀಸ್ ಅಧಿಕಾರಿಗೆ ಶಾಸನಾತ್ಮಕ ಹಕ್ಕನ್ನು ಪ್ರದಾನ ಮಾಡುತ್ತದೆ. ಮೇಲಿನ ತೀರ್ಪಿನಲ್ಲಿ ನಿರ್ಣಯಿಸಿರುವಂತೆ, ಅದು "ಇನ್ನು ಮುಂದೆ ಪೂರ್ವನಿದರ್ಶನರಹಿತ ವಿಷಯವಲ್ಲ", ಎಂದರೆ, ಮ್ಯಾಜಿಸ್ಟ್ರೇಟರಿಗೆ, ನ್ಯಾಯದ ಕಾರಣವನ್ನು ಕಂಡುಕೊಳ್ಳಲು ಹಾಗೆ ಮಾಡುವುದು ಅಗತ್ಯವಾದರೆ, ಸಂಹಿತೆಯ 173(8)ನೇ ಪ್ರಕರಣದ ಅಡಿಯಲ್ಲಿ ಅಂತಿಮ ವರದಿಯನ್ನು ಸಲ್ಲಿಸಿದ ತರುವಾಯವೂ, ಹೆಚ್ಚಿನ ತನಿಖೆಯನ್ನು ಅವರು ಪುನರಾರಂಭಿಸಬಹುದು. ಆದುದರಿಂದ, ಈ ಪ್ರಕರಣವು, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಕೋರಿದಂತೆ ವಿಚಾರಣೆಯ ಅವಧಿಯಲ್ಲಿ ಪ್ರಾಸಿಕ್ಯೂಷನ್‌ಗೆ ಸಮರ್ಥನೆಯಾಗಿ ಹೆಚ್ಚಿನ ಸಾಕ್ಷ್ಯವನ್ನು ಹಾಜರುಪಡಿಸುವುದರಿಂದ ಅದನ್ನು ನಿರ್ಬಂಧಿಸಬೇಕೆಂದು ಅರ್ಥೈಸಲಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ, ಸಂಹಿತೆಯ 242(3)ನೇ ಪ್ರಕರಣದ ಪರಿಭಾಷೆಯು, ಪ್ರಾಸಿಕ್ಯೂಷನ್‌ಗೆ ಸಮರ್ಥನೆಯಾಗಿ, ಅದು ಹಾಜರುಪಡಿಸಿದ ಎಲ್ಲಾ ಸಾಕ್ಷ್ಯವನ್ನು ತೆಗೆದುಕೊಳ್ಳಲು ಮ್ಯಾಜಿಸ್ಟ್ರೇಟರಲ್ಲಿ ಅಧಿಕಾರವನ್ನು ನಿಹಿತಗೊಳಿಸಲು ಪರ್ಯಾಪ್ತವಾಗಿದೆ.

ಆದುದರಿಂದ, ಪ್ರಶ್ನಿತ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ನನಗೆ ಯಾವುದೇ ನ್ಯಾಯೋಚಿತ ಕಾರಣವು ಕಂಡುಬರುತ್ತಿಲ್ಲ.

ತದನುಸಾರ, ಕ್ರಿಮಿನಲ್ ಅರ್ಜಿಯನ್ನು ವಜಾಗೊಳಿಸಲಾಗಿದೆ.

ಐ.ಎ. ಸಂಖ್ಯೆ: 1/2018 ಇದು ಪರಿಗಣನೆಗೆ ಆಸ್ಪದ ನೀಡುವುದಿಲ್ಲ ಮತ್ತು ತದನುಸಾರ, ಇದನ್ನು ತಳ್ಳಿಹಾಕಲಾಗಿದೆ.